# 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ.

## ಸಿಸಿ. 5722/2008

| | |
|---|---|
| ಸಾಕ್ಷಿದಾರರ ಹೆಸರು | ಎಮ್.ಕೆ. ಉತ್ತಪ್ಪ |
| ತಂದೆಯ ಹೆಸರು | ಲೇಟ್. ಎಮ್.ಬಿ. ಕಾಳಪ್ಪ |
| ವಯಸ್ಸು | 70 ವರ್ಷ |
| ಉದ್ಯೋಗ | ನಿವೃತ್ತ ಎ.ಸಿ.ಪಿ. |
| ವಾಸ | ಕೊಡಗು. |
| ಪ್ರಮಾಣೀಕರಿಸಿದ ದಿನಾಂಕ | 17/01/2024 |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

1. 2005 ರಿಂದ 10/10/2007 ರವರೆಗೆ ಬ್ಯಾಟರಾಯಪುರ ಪೊಲೀಸ್ ಠಾಣೆಯಲ್ಲಿ ಪಿ.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 03/09/2007 ರಂದು ಪಿ.ಐ ಎಸ್.ಜೆ. ಪಾರ್ಕ ಇವರಿಂದ ಅವರ ಪೊಲೀಸ್ ಠಾಣಾ ಮೊ.ಸಂ. 52/2006 ರಲ್ಲಿ ನಮ್ಮ ಠಾಣೆಯ ಮೊ.ಸಂ.103/2006 ರ ದಾಖಲೆಗಳನ್ನು ಕೇಳಿ ಪತ್ರವನ್ನು ನೀಡಿದ್ದರು. ನಾನು ಆ ಪತ್ರವನ್ನು ಸ್ವೀಕರಿಸಿದ್ದೇನೆ. ನಂತರ ನನಗೆ ವರ್ಗಾವಣೆಯಾಗಿದ್ದರಿಂದ ಸದರಿ ಪತ್ರವನ್ನು ಮುಂದಿನ ಅಧಿಕಾರಿಗಳಿಗೆ ನೀಡಿರುತ್ತೇನೆ. ಸದರಿ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಪತ್ರ ಕಡತದಲ್ಲಿ ಇರುವುದಿಲ್ಲ, ಅದರ ಕಾರ್ಬನ ಪ್ರತಿಯನ್ನು ಇದೇ ದಿನ ಸಾಕ್ಷಿ ಹಾಜರುಪಡಿಸಿದ್ದು, ಅದನ್ನು ನಿಪಿ-21 ಎಂದು, ಸಾಕ್ಷಿ ಸ್ವೀಕರಿಸಿದ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ.ಸಿ.ಎನ್.ಡಿ. ವಕೀಲರಿಂದಃ**

2. ಬ್ಯಾಟರಾಯನಪುರ ಠಾಣೆಯ ಆರೋಪಿಯ ವಿರುದ್ದ ಪ್ರಕರಣ ಸಿ.ಸಿ. 23628/2006 ದಿನಾಂಕ 31/10/2007 ರಂದು ಇದೇ ನ್ಯಾಯಾಲಯದಲ್ಲಿ ಆರೋಪಿಯ ಯಾವುದೇ ತಪ್ಪು ಇಲ್ಲ ಎಂದು ಬಿಡುಗಡೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**